ಭಾಗ ಯಂತ್ರದಲ್ಲೇ ಸಿಕ್ಕಿಹಾಕಿಕೊಂಡಿತು. ಅದನ್ನು ಬಿಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಂತೆಯೇ ಪೋಲೀಸರು ಬಂದು ಅವರನ್ನು ಹಿಡಿದುಹಾಕಿದರು.

ಹೌದು! ಎ.ಟಿ.ಎಮ್. ತಂತ್ರಜ್ಞಾನದಲ್ಲಿ ತುರ್ತು ಸಮಯದಲ್ಲಿ ಬಳಸುವ ಹೀಗೊಂದು ಗುಟ್ಟಾದ ವ್ಯವಸ್ಥೆ ಇದೆ. ಒಂದುವೇಳೆ ನಿಮ್ಮ ಕಾರ್ಡಿನ ಪಿನ್ ಸಂಖ್ಯೆ ೧೨೩೪ ಎಂದಿದ್ದರೆ, ನೀವು ೪೩೨೧ ಎಂದು ಒತ್ತಿದರೆ ಸಾಕು. ತಕ್ಷಣ ಅದು ಹತ್ತಿರದ ಪೋಲೀಸ್ ಠಾಣೆಗೆ ಅಲಾರ್ಮ್ ಕಳಿಸುತ್ತದೆ ಹಾಗೂ ಹಣ ಯಂತ್ರದಲ್ಲೇ ಸಿಕ್ಕಿಹಾಕಿಕೊಳ್ಳುವಂತೆ ಮಾಡುತ್ತದೆ. ಆರ್. ಬಿ. ಐ. ನವರು ಬಯಲು ಮಾಡಿದ ಈ ತಂತ್ರ ನಿಮ್ಮ ಗೆಳೆಯರೊಂದಿಗೆ ಹಂಚಿಕೊಳ್ಳಿ ಅಪಾಯದಿಂದ ಪಾರಾಗಿ.

# ಮೆಸೇಜ್ 4

ಎರಡು ವಾರಗಳ ಹಿಂದೆ ಬೆಂಗಳೂರಿನ ಜನನಿಬಿಡ ರಸ್ತೆಯಲ್ಲಿ ನಡೆದ ಘಟನೆ. ಬಹುಶಃ ನೀವು ಇದನ್ನು ದಿನ ಪತ್ರಿಕೆಗಳಲ್ಲೂ ಓದಿರಬಹುದು. ವೇಗವಾಗಿ ಚಲಿಸುತ್ತಿದ್ದ ಬಿ.ಎಂ.ಟಿ.ಸಿ ಬಸ್ಸೊಂದು ಹಠಾತ್ತನೆ ನಿಂತ ಕಾರಣ ಹಿಂಬಾಲಿಸುತ್ತಿದ್ದ ಸ್ಕೂಟರ್ ಸವಾರ ಬಸ್ಸಿಗೆ ಬಲವಾಗಿ ಡಿಕ್ಕಿ ಹೊಡೆದು ವಾಹನದೊಂದಿಗೆ ಕೆಳಗೆ ಬಿದ್ದ. ನಂತರ ಚೇತರಿಸಿಕೊಂಡು ಎದ್ದವನೇ, ಡ್ರೈವರ್ ಬಾಗಿಲ ಬಳಿ ಹೋಗಿ ಅವನ ಮೇಲೆ ರೇಗಾಡುತ್ತಾ, ತಲೆಗೆ ಹಾಕಿದ್ದ ಹೆಲ್ಮೆಟ್ ತೆಗೆದ. ಇಷ್ಟು ಹೊತ್ತೂ ಏನೂ ಆಗದೆ ಇದ್ದಂತೆ ಕಂಡ ಈತನ ತಲೆ ಬುರುಡೆ ಒಳಗೇ ಒಡೆದು ಹೋಗಿತ್ತು. ಹೆಲ್ಮೆಟ್ ತೆಗೆಯುತ್ತಿದ್ದಂತೆಯೇ ಅದರಲ್ಲಿ ಮೂಳೆ, ಮೆದುಳು ರಕ್ತ ಎಲ್ಲವೂ ತುಂಬಿತ್ತು. ಆವ್ಯಕ್ತಿ ಹಾಗೇ ಕುಸಿದು ಬಿದ್ದು ಸತ್ತುಹೋದ.

# ಮೆಸೇಜ್ 5

ಸಾರ್ವಜನಿಕರಲ್ಲಿ ಎಚ್ಚರಿಕೆ: ನಿಮಗೆ ಈ ಕೆಳಕಂಡ ಸಂಖ್ಯೆಗಳಿಂದ ಕರೆ ಬಂದರೆ ದಯವಿಟ್ಟು ಉತ್ತರಿಸಬೇಡಿ. ಹಾಗೂ ಆ ನಂಬರಿಗೆ ಮತ್ತೆ ನೀವು ಕಾಲ್ ಸಹ ಮಾಡಬೇಡಿ. ನಿಮಗೆ ಯಾರಾದರು #09 ಅಥವಾ #90 ಇಂದ ಕರೆ ಮಾಡಲು ಹೇಳಿದರೆ ದಯವಿಟ್ಟು ಮಾಡಬೇಡಿ. ಇದು ಐ.ಎಸ್.ಐ.ಎಸ್. ನವರಿಂದ ಬಂದ ಕರೆ ಆಗಿರಬಹುದು. ನೀವು ಉತ್ತರಿಸಲು ಪ್ರಾರಂಭಿಸಿದರೆ, ಕೇವಲ ೩೦ ಸೆಕೆಂಡುಗಳಲಿ ನಿಮ್ಮ ಪೋನಿನಲ್ಲಿರುವ ಎಲ್ಲ ಮಾಹಿತಿ ಅವರಿಗೆ ಸಿಕ್ಕುಬಿಡುತ್ತದೆ. ನಿಮ್ಮ ಫೋನ್ ನಲ್ಲಿ ನಿಮ್ಮ ಕ್ರೆಡಿಟ್ ಕಾರ್ಡ್ ವಿವರಗಳು ಇದ್ದರೆ ಅದೂ ಅವರಿಗೆ ಸಿಕ್ಕಿಬಿಡುತ್ತದೆ. ಈ ಮಾಹಿತಿಯನ್ನು ಎಲ್ಲರೊಂದಿಗೆ ಹಂಚಿಕೊಳ್ಳಿ.

# ಮೆಸೇಜ್ 6

ಇಂದು ರಾತ್ರಿ ೧೨;೩೦ ರಿಂದ ೩: ೩೦ರ ವರೆಗೆ ನಿಮ್ಮ ಎಲ್ಲ ಎಲೆಕ್ಟ್ರಾನಿಕ್ ಉಪಕರಣಗಳನ್ನೂ ಸ್ವಿಚ್ ಆಫ್ ಮಾಡಿ ಇಡಿ. ಯಾವ ಕಾರಣಕ್ಕೂ ಅವನ್ನು ಬಳಸಬೇಡಿ. ಸೂರ್ಯನಿಂದ ಪ್ರಖರವಾದ ಆಯಸ್ಕಾಂತೀಯ ಮಾರುತವೊಂದು ಭೂಮಿಗೆ ಅಷ್ಟು ಹೊತ್ತಿನಲ್ಲಿ ಬಂದು ಅಪ್ಪಳಿಸಲಿದೆ. ಈ ಸಮಯದಲ್ಲಿ ಸೆಲ್ ಫೋನ್, ಲ್ಯಾಪ್ ಟಾಪ್ ನಂತಹ ಉಪಕರಣಗಳನ್ನು ಬಳಸುವುದು ನಿಮ್ಮ ವಸ್ತುವಿಗೂ, ನಿಮಗೂ ಹಾನಿ ಉಂಟುಮಾಡಬಹುದು. ಹೀಗೆಂದು ನಾಸಾ ಬಿಬಿಸಿ ನ್ಯೂಸಿಗೆ ವರದಿ ಮಾಡಿದೆ. ಆದಷ್ಟೂ ಜನರಿಗೆ ಈ ಮಾಹಿತಿಯನ್ನು ತಲುಪಿಸಿ.

***

ಇಂತಹ ಮೆಸೇಜ್‌ಗಳು ನಿಮಗೆ ಆಗಿಂದಾಗ್ಗೆ ವಾಟ್ಸಪ್‌ನಲ್ಲೂ ಹಾಗೂ ಫೇಸ್‌ಬುಕ್ಕಿನಲ್ಲೂ ಬಂದಿರಬಹುದು. ಈ ಬಗ್ಗೆ ನೀವೂ ಆತಂಕಗೊಂಡು ನಿಮ್ಮ ಗೆಳೆಯರಿಗೆ ಆ ಮಾಹಿತಿಗಳನ್ನು ರವಾನೆ ಮಾಡಿರಬಹುದು. ಇಂತಹ ಘಟನೆಗಳನ್ನು ನಗರ ದಂತಕಥೆಗಳು ಎಂದು ಹೇಳುತ್ತಾರೆ. ಇವೆಲ್ಲ ಕೇವಲ ಸುಳ್ಳು ಸುದ್ದಿಯಾಗಿರುತ್ತವೆ.

ಸೆಲ್ ಪೋನು, ಹಾಗೂ ಇಂಟರ್ನೆಟ್ ಬರುವ ಮುನ್ನವೂ ಇಂತಹ 'ಅರ್ಬನ್ ಲೆಜೆಂಡ್'ಗಳು ಅಸ್ತಿತ್ವದಲ್ಲಿ ಇದ್ದವು. ಆದರೆ ಅವುಗಳು ಇಷ್ಟು ವೇಗವಾಗಿ ಹಬ್ಬುತ್ತಿರಲಿಲ್ಲ. ಎಂತಹ ವಿವೇಕಸ್ಥನೂ ವಿದ್ಯಾವಂತನೂ ಸಹ ಒಂದಲ್ಲ ಒಂದು ಬಾರಿಯಾದರೂ ಈ ದಂತಕಥೆಗಳನ್ನು ನಂಬಿ ಮೋಸ ಹೋಗಿರುತ್ತಾನೆ.

ಇವು ನಮ್ಮ ದೇಶದಲ್ಲಿ ಮಾತ್ರ ಹೀಗೆ ನಡೆಯುತ್ತದೆ ಎಂದುಕೊಳ್ಳಬೇಡಿ. ಅತ್ಯಂತ ನಾಗರಿಕ ದೇಶವೆಂದು ಮೆರೆಯುವ ಅಮೆರಿಕ ಹಾಗೂ ಪ್ರಪಂಚದ ಎಲ್ಲ ನಾಗರಿಕತೆಗಳಲ್ಲೂ ಈ ರೀತಿಯ ಗಾಳಿಸುದ್ದಿಗಳು ಆಯಾ ಪ್ರದೇಶಕ್ಕೆ ಅನುಗುಣವಾಗಿ ಚಾಲ್ತಿಯಲ್ಲಿರುತ್ತದೆ.

ಅಮೆರಿಕದ ಸೈಂಟ್ ಲೂಯೀನಲ್ಲಿ ಯಾರೊ ಒಂದು ಮೊಸಳೆಯ ಮರಿಯನ್ನು ಮುದ್ದು ಪ್ರಾಣಿಯಾಗಿ ತಂದು ಸಾಕ ತೊಡಗಿದನಂತೆ. ದಿನದಿನಕ್ಕೂ ಅದು ಗಾತ್ರದಲ್ಲಿ ಬೆಳೆದಂತೆ ಅವನಿಗೆ ಅದನ್ನು ನೋಡಿಕೊಳ್ಳಲಾಗದೇ ಕಮೋಡಿನಲ್ಲಿ ಫ್ಲಷ್ ಮಾಡಿಬಿಟ್ಟನಂತೆ. ಈಗ ಅಮೆರಿಕದ ಒಳ ಚರಂಡಿಗಳಲ್ಲಿ ಮೊಸಳೆಗಳ ಹಾವಳಿಯಾಗಿದೆಯಂತೆ!

ನಗರ ದಂತ ಕಥೆಗಳು ಅನೇಕ ವರ್ಷಗಳ ಕಾಲ ಚಾಲ್ತಿಯಲ್ಲಿ ಇರುತ್ತವೆ. ಆಗಿಂದಾಗ್ಗೆ ಅದಕ್ಕೆ ಬಣ್ಣ ಹಾಗೂ ನಿರೂಪಣೆಗಳು ಸುಧಾರಣೆಗೊಂಡು ಮತ್ತೆ ಚಾಲ್ತಿಗೆ ಬರುತ್ತವೆ. ಜನರು ಇಷ್ಟು ವಿದ್ಯಾವಂತರಾದರೂ ಇಂತಹ ಮೂಢ ನಂಬಿಕೆಗೆ ಏಕೆ ಒಳಗಾಗುತ್ತಾರೆ?

ಇವುಗಳ ಲಕ್ಷಣಗಳನ್ನು ಅಧ್ಯಯನ ಮಾಡಿದರೆ ಇದಕ್ಕೆ ಉತ್ತರ ದೊರೆಯುತ್ತದೆ. ಮೊದಲನೆಯದಾಗಿ ಇದು ಜನರ ಹಿತಕ್ಕಾಗಿ ಪ್ರಚಾರ ಮಾಡುತ್ತಿರುವ ಮಾಹಿತಿಯಂತೆ ಇರುತ್ತದೆ. ನಿಮಗೆ ಎಚ್ಚರಿಕೆ, ಮುಂಜಾಗ್ರತೆಯ ರೂಪದಲ್ಲಿ ಇರುತ್ತದೆ. ಎರಡನೆಯದಾಗಿ ಅದನ್ನು ಕಳಿಸಿದ ವ್ಯಕ್ತಿಯ ಸಮೀಪ ಬಂಧು ಗೆಳೆಯನ ತೀರಾ ಖಾಸಗೀ ಅನುಭವದ ಹಾಗೆ ಅದರ ಶೈಲಿ ಇರುತ್ತದೆ. ಈ ಘಟನೆ ಇಲ್ಲೇ ನಿಮ್ಮ ಸುತ್ತಮುತ್ತಲೇ, ನಿನ್ನೆ ಮೊನ್ನೆಯಷ್ಟೇ ನಡೆದಿದೆ ಎಂಬಂತೆ ಇರುತ್ತದೆ. ಹೀಗಾಗಿ ನಮಗೆ ಹೌದೇನೋ, ನಂಬಲೇಬೇಕು ಎನಿಸಿಬಿಡುತ್ತದೆ.

ಇದು ಸುಳ್ಳು ಎಂದು ವಿವೇಕ ಹೇಳಿದರೂ 'ಅಯ್ಯೋ, ವಿಷಯ ತಿಳಿದೂ ಸಹ ನಮ್ಮ ಆಪ್ತರಿಗೆ ಇದನ್ನು ನಾನು ತಿಳಿಸದೆ ಆಮೇಲೆ ಅನಾಹುತವಾದರೆ ಏನು ಗತಿ. ಕಳಿಸೋದು ಕಳಿಸಿಬಿಡೋಣ' ಎಂದೂ ಅನಿಸುತ್ತದೆ.

ಇದು ಎಚ್ಚರಿಕೆಯ ರೂಪದಲ್ಲಿ ಮಾತ್ರವಲ್ಲದೆ ದೇಶಪ್ರೇಮವನ್ನು ಕೆರಳಿಸುವ ರೂಪದಲ್ಲೂ ಇರುತ್ತದೆ. ಇತ್ತೀಚೆಗೆ 'ನಮ್ಮ ದೇಶದ ರಾಷ್ಟ್ರಗೀತೆಯನ್ನು ಪ್ರಪಂಚದ ಅತ್ಯುತ್ತಮ ರಾಷ್ಟ್ರಗೀತೆ ಎಂದು ಯುನೆಸ್ಕೋ ತೀರ್ಮಾನಿಸಿದೆ. ಪ್ರಪಂಚದ ಅತ್ಯುತ್ತಮ ಪ್ರಧಾನಿ ನರೇಂದ್ರ ಮೋದಿ ಎಂದು ಯುನೆಸ್ಕೋ ಕಳೆದ ವಾರ ಘೋಷಿಸಿದೆ' ಎಂಬ ಮೆಸೇಜ್‌ಗಳು ಬಂದವು. ಯುನೆಸ್ಕೋಗೆ ಮಾಡಲು ಬೇರೆ ಕೆಲಸವಿಲ್ಲವೇ? 'ಫೆಬ್ರವರಿ 14ರಂದು ನೀವು ಪ್ರೇಮಿಗಳ ದಿನಾಚರಣೆ ಮಾಡುತ್ತೀರ? ಆ ದಿನದ ಪಾವಿತ್ರ್ಯ ಗೊತ್ತಾ ನಿಮಗೆ? ಭಗತ್‌ಸಿಂಗ್ ಅವರನ್ನು ಗಲ್ಲಿಗೆ ಏರಿಸಿದ ದಿನ ಅದು. ಅಲ್ಲಿ ಅವನು ನಮ್ಮ ದೇಶಕ್ಕೆ ಪ್ರಾಣವನ್ನೇ ತ್ಯಾಗ ಮಾಡಿದರೆ ಆ ದಿನದಂದು ನೀವು ಹೀಗೆ ಮೋಜು ಮಾಡಲು ಮನಸ್ಸು ಹೇಗೆ ಬರುತ್ತದೆ?' ಎನ್ನುವುದೊಂದು ಮೆಸೇಜು! ಇದೂ ಶುದ್ಧ ಸುಳ್ಳು. ಭಗತ್ ಸಿಂಗ್ ಅವರನ್ನು ಗಲ್ಲಿಗೆ ಏರಿಸಿದ್ದು ಮಾರ್ಚ್ 23ನೆಯ ತಾರೀಕು!

ಆಧುನಿಕ ಪ್ರಪಂಚದಲ್ಲಿ ಸಾರ್ವಜನಿಕರಿಗೆ ಆಗಬಹುದಾದ ವಿಪತ್ತುಗಳ ಬಗ್ಗೆ ಎಚ್ಚರಿಸುವಂತೆ ಕಾಣುವ ನಗರ ದಂತ ಕಥೆಗಳ ಸತ್ಯದ ಅಂಚುಗಳು ಮಸುಕಾಗಿರುತ್ತವೆ. ಕ್ವಾಂಟಮ್ ಮೆಕಾನಿಕ್ಸ್ ಬಗ್ಗೆ ನ್ಯಾನೋ ತಂತ್ರಜ್ಞಾನದ ಬಗ್ಗೆ ಮೋಸಹೋಗದ ಜೀನಿಯಸ್‌ಗಳು ಸುಲಭವಾಗಿ ನಗರ ದಂತ ಕಥೆಗಳಿಗೆ ಬಲಿಯಾಗುತ್ತಾರೆ.

ಶಿಲಾಯುಗದಿಂದಲೂ ಕಥೆಗಳನ್ನು ಕೇಳುತ್ತಾ ಬಂದಿರುವ ಮನುಷ್ಯ ಪ್ರಬೇಧದ ಈ ಪ್ರಾಣಿಗೆ ವಿದ್ಯುನ್ಮಾನ ಯುಗದಲ್ಲೂ ಸಹ ಕಥೆ ಕೇಳುವುದು ಮುಖ್ಯವಾಗಿದೆ. ಹೀಗಾಗಿ ಅವನಿಗೇ ತಿಳಿಯದಂತೆ ಕಥೆಯನ್ನು ಕೇಳಲು, ನಂಬಲು ಆಂತರಿಕವಾಗಿ ಅವನು ಸಿದ್ಧವಾಗಿರುತ್ತಾನೆ. ಹೀಗಾಗಿ ಇಂದಿಗೂ ಟಿವಿ. ಧಾರಾವಾಹಿಗಳ ಟಿ.ಆರ್.ಪಿ. ಅಷ್ಟು ಏರುವುದು. ಕಥೆಗಳು ಮನುಷ್ಯನಿಗೆ ಸಾಮಾಜಿಕ ಬಂಧಕವಾಗಿವೆ. ಅವು ಸಾಮಾಜಿಕ ಭದ್ರತೆಯನ್ನೂ ನೀಡಬಲ್ಲವು, ಕೆಲವೊಮ್ಮೆ ಯಾಮಾರಿಸಿ ತಪ್ಪು ಕಲ್ಪನೆಗಳತ್ತ ಕೊಂಡೊಯ್ಯಬಹುದು. ಇವುಗಳನ್ನು ಟೀಕೆ, ವಿಮರ್ಶೆಗಳಿಂದ ನಾಶ ಪಡಿಸಲು ಸಾಧ್ಯವಿಲ್ಲ.

ನಿಜವೇ ಇರಬಹುದೇನೋ.. ಯಾರಿಗೆ ಗೊತ್ತು? ಎಂಬಂತೆಯೇ ಈ ಕಥೆಗಳು ರೂಪಿತವಾಗುತ್ತವೆ. ಜನಪದ ಸಾಹಿತ್ಯದಂತೆ ಇವುಗಳ ರಚನಕಾರರು ಯಾವಾಗಲೂ ಅನಾಮಧೇಯರಾಗಿಯೇ ಉಳಿಯುತ್ತಾರೆ. ಇಂತಹ ಕಥೆಗಳನ್ನೇ ಆಧಾರವಾಗಿಟ್ಟುಕೊಂಡು ಎಕ್ಸ್–ಫೈಲ್ಸ್ ನಂತಹ ಧಾರಾವಾಹಿಗಳು, ಹೀಗೂ ಉಂಟೆ ಅಂತಹ ಧಾರಾವಾಹಿಗಳು ತಯಾರಾಗುತ್ತಿವೆ. ಇವೀಗ ಸಮಾಜಶಾಸ್ತ್ರದ, ಮನೋವಿಜ್ಞಾನದ, ಸಾಹಿತ್ಯ ಶೈಲಿಯ ಅಂತರ್ ಶಾಸ್ತ್ರೀಯ ಅಧ್ಯಯನ ಮಾಡುವಷ್ಟು ಮಹತ್ವ ಹೊಂದಿದೆ.